

ಚಿಕ್ಕ ಸಮಸ್ಯೆಯೊಂದು ವಿಕೋಪಕ್ಕೆ ಹೋಗಲು ನಂಟು ಹೇಗೆ ಕಾರಣವಾಗುತ್ತದೆ?

ಡಾ.ವಿನೋದ ಛೆಬ್ಬಿ

# 31: ಭಿನ್ನ ಭಾವಗಳ ಸಂಘರ್ಷ

ಕೆಲವು ವಾರಗಳಿಂದ ನಂಟಿನ ನಮೂನೆಗಳ ಬಗೆಗೆ ಚರ್ಚಿಸುತ್ತಿದ್ದೆವು. ಪೋಷಕರು ಶಿಶುಗಳಿಗೆ ತೋರುವ ಕಾಳಜಿಯನ್ನು– ಅಥವಾ ಅದರ ಅಭಾವವನ್ನು– ಅನುಸರಿಸಿ ಮಕ್ಕಳು ಭದ್ರಭಾವ, ಆತಂಕಭಾವ, ಏಕಾಂಗಿಭಾವ ಅಥವಾ ಕ್ಷೋಭಾಭಾವದ ನಂಟನ್ನು ಬೆಳೆಸಿಕೊಂಡು, ಅದನ್ನೇ ದಾಂಪತ್ಯದಲ್ಲಿ ತೋರ್ಪಡಿಸುತ್ತಾರೆ ಎಂದು ಕಂಡುಕೊಂಡೆವು.

ನಂಟಿನ ನಮೂನೆಗಳ ಬಗೆಗೆ ಇಷ್ಟರಲ್ಲೇ ಅನೇಕರು ನನ್ನನ್ನು ಪ್ರಶ್ನಿಸಿದ್ದಾರೆ. ಈ ಭಾವಗಳು ನಿಜವೆ? ಇದನ್ನು ನಂಬಬಹುದೆ? ಚಿಕ್ಕ ಶಿಶುವಿಗೆ ಏನು ಮಹಾ ಗೊತ್ತಾಗುತ್ತದೆ? ನಿಜ ಹೇಳಬೇಕೆಂದರೆ ನಾನೂ ಇದನ್ನು ನಂಬಿರಲಿಲ್ಲ– ಅಮೆರಿಕೆಯಲ್ಲಿ ಒಂದು ಕಾರ್ಯಾಗಾರದಲ್ಲಿ ಸುಪ್ರಸಿದ್ಧ ದಾಂಪತ್ಯ ಚಿಕಿತ್ಸಕ ಡಾ. ಸುಸಾನ್ ಜಾನ್ಸನ್ ತೋರಿಸಿದ ಒಂದು ಅದ್ಭುತ ಪ್ರಯೋಗ ಚಿತ್ರವನ್ನು ನೋಡುವ ತನಕ. (ಡಾ. ಎಡ್ವರ್ಡ್ ಟ್ರೋನಿಕ್ ಮಾಡಿದ ಈ ಪ್ರಯೋಗದ ಹೆಸರು **Still Face Experiment.** ಈ ಚಿತ್ರವನ್ನು **YouTube** ನಲ್ಲಿ ನೀವೂ ನೋಡಬಹುದು. ಲಿಂಕ್: **https://m.youtube.com/watch?v=apzXGEbZht0**) ತಾಯಿಯು ಗಮನ ಕೊಡುವಾಗ ಹಾಗೂ ಕೊಡದಿರುವಾಗ ಶಿಶುವು ಹೇಗೆ ಸ್ಪಂದಿಸುತ್ತದೆ ಎಂಬುದು ನಿಸ್ಸಂದೇಹವಾಗಿ ರುಜುವಾತಾಗುತ್ತದೆ.

ಇಲ್ಲಿಯ ತನಕ ವೈಯಕ್ತಿಕ ನಂಟಿನ ನಮೂನೆಯನ್ನೂ, ಅದು ದಾಂಪತ್ಯದಲ್ಲಿ ಪ್ರಕಟಗೊಳ್ಳುವ ಬಗೆಯನ್ನೂ ಕಂಡೆವು. ದಾಂಪತ್ಯದಲ್ಲಿ ಇಬ್ಬರು ಸೇರುವಾಗ ಎರಡು ನಂಟಿನ ನಮೂನೆಗಳು ಸೇರುತ್ತವಷ್ಟೆ? ಪರಿಣಾಮ ಏನಾಗಬಹುದು? ನಂಟಿನ ನಮೂನೆಗಳು ಒಂದೇ ಆಗಿದ್ದರೆ ಅಥವಾ ಭಿನ್ನವಾಗಿದ್ದರೆ ಎಂಥ ಸಂಘರ್ಷಕ್ಕೆ ಎಡೆಯಾಗಬಹುದು? ಫಲಶ್ರುತಿ ಏನಾಗಬಹುದು? ಇದನ್ನು ದೃಷ್ಟಾಂತ ಸಹಿತ ನೋಡೋಣ.

ವಿಶೂ ಹಾಗೂ ವಿಶಾಲಾ (ಹೆಸರು ಕಾಲ್ಪನಿಕ) ಇಬ್ಬರೂ ಬಯಸಿ ಮದುವೆ ಆಗಿದ್ದಾರೆ. ವಿಶು ಭದ್ರಭಾವದವನು. ಅವನ ಬಾಲ್ಯ ಸಮೃದ್ಧವಾಗಿದೆ (ನೋಡಿ: ಕಂತು 27). ವಿಶಾಖಾ ಆತಂಕ ಭಾವದವಳು. ತನಗೆ ಸಿಕ್ಕಿದ್ದು ತೃಪ್ತಿಕರವೇ ಎಂದು ಗಮನಿಸುತ್ತಾಳೆ (ನೋಡಿ: ಕಂತು 28). ಹಾಗಾಗಿ ಚಿಕ್ಕ ದೋಷಗಳು ಆಕೆಗೆ ದೊಡ್ಡದಾಗಿ ಕಂಡು ಅಸಾಮರ್ಥ್ಯ ಕಾಡುತ್ತದೆ. ಅದನ್ನು ವಿಶೂನ ಜೊತೆಗೆ ಹಂಚಿಕೊಳ್ಳುತ್ತಾಳೆ. ವಿಶೂ ಅವೆಲ್ಲ ಕ್ಷುಲ್ಲಕ ಸಂಗತಿಗಳೆಂದೂ, ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲವೆಂದೂ ಭರವಸೆ ಕೊಡುತ್ತಾನೆ. ಈ ಭರವಸೆಯು ತಾನು ನಂಬುವವನ ಮೂಲಕ ಬರುವುದರಿಂದ ಆಕೆ ಸಮಾಧಾನ ಹೊಂದುತ್ತಾಳೆ. ಸಮಸ್ಯೆ ತೀರ ತಲೆ ತಿನ್ನುವಂತೆ ಇದ್ದರೆ ವಿಶೂ ಹೇಗಿದ್ದರೂ ಪರಿಹರಿಸುತ್ತಾನಲ್ಲವೆ? ಹಾಗಾಗಿ ನಿಶ್ಚಿಂತೆಯಿಂದ ಇದ್ದಾಳೆ. ಒಮ್ಮೆ ಏನಾಯಿತು ಎಂದರೆ, ಅವರು ಮನೆ ಕಟ್ಟಿಸುವಾಗ ಸೋಲಾರ್ ಹೀಟರ್ ಅಳವಡಿಸಲು ಯೋಜಿಸಿದರು. ವಿಶಾಲಾ ಒಬ್ಬ ಮಾರಾಟಗಾರನಿಗೆ ಹತ್ತುಸಾವಿರ ಮುಂಗಡ ಕೊಟ್ಟಳು. ಅವನು ಕೈಕೊಟ್ಟು ತಲೆತಪ್ಪಿಸಿಕೊಂಡ. ಈಕೆಗೆ ಆಘಾತವಾಗಿ ಮನಶಾಂತಿ ಹಾಳಾಯಿತು. ವಿಶೂಗೆ? ಅವನ ಮನಸ್ಸೂ ಚುಳ್ಳೆಂದಿತು. ಆಗ ಅವರ ನಡುವಿನ ಸಂಭಾಷಣೆ ಕೇಳಿ:

ವಿಶೂ: ಮನೆಗೆ ಲಕ್ಷಾಂತರ ಸುರಿಯುತ್ತಿರುವಾಗ ಕೆಲವೊಮ್ಮೆ ಹೀಗೂ ಆಗುತ್ತದೆ. ಹಾಗಾಗಿ ಒಟ್ಟಿನಲ್ಲಿ ಏನಾಗಿದೆ ಎಂದು ನೋಡಬೇಕಷ್ಟೆ. ಯೋಚಿಸಬೇಡ.

ವಿಶಾಲಾ: ಆ ಎಜೆಂಟನನ್ನು ಹಿಡಿದು ಹಣ ಒದ್ದು ವಸೂಲು ಮಾಡಿ! ಅಲ್ಲಿಯ ತನಕ ನನಗೆ ಸಮಾಧಾನವಿಲ್ಲ!

ವಿಶೂ: ಅದು ಸುಲಭವಲ್ಲ. ಅವನ ಮೇಲೆ ಹಾಳು ಮಾಡುವ ಸಮಯವನ್ನು ನನ್ನ ವ್ಯವಹಾರದಲ್ಲಿ ತೊಡಗಿಸಿದರೆ ಅದಕ್ಕಿಂತ ಹೆಚ್ಚಿನ ಲಾಭವಾದೀತು.

ವಿಶಾಲಾ: ಹೆಚ್ಚಿನ ಲಾಭವಾದರೂ ಕಳೆದುಹೋದ ಹಣ ಬಂದೀತೆ?

ವಿಶೂ: ನಿನ್ನ ಹತ್ತು ಲಾಟರಿ ಟಿಕೆಟ್‌ಗಳಲ್ಲಿ ಒಂದಕ್ಕೆ ಒಂದು ಕೋಟಿ ಬಂದರೆ ಸಂತೋಷಪಡುತ್ತೀಯಾ? ಅಥವಾ ಒಂಬತ್ತು ಟಿಕೆಟ್‌ಗಳು ವ್ಯರ್ಥವಾದುದಕ್ಕೆ ಚಿಂತಿಸುತ್ತೀಯಾ?

ಕೊನೆಗೆ ವಿಶಾಲಾ ವಿಶೂನನ್ನು ದುಂದುಗಾರ ಎಂದು ಆರೋಪಿಸಿ ಸುಮ್ಮನಾಗುತ್ತಾಳೆ.

ಮೇಲೆ ತಿಳಿಸಿದ್ದು ಒಂದು ವ್ಯಾವಹಾರಿಕ ಸಮಸ್ಯೆ. ಹಾಗಾಗಿ ಹೇಗೋ ಬಗೆಹರಿಯುತ್ತದೆ– ಬಗೆಹರಿಯದಿದ್ದರೂ ನಡೆಯುತ್ತದೆ. ಯಾಕೆಂದರೆ ಇಲ್ಲಿ ಒಬ್ಬರ ಬುದ್ಧಿ ನಿರ್ಧಾರವನ್ನು ಇನ್ನೊಬ್ಬರು ಒಪ್ಪಬಹುದು. ಆದರೆ ಭಾವನಾತ್ಮಕ ಸಮಸ್ಯೆಗಳು ಬಂದಾಗ? ಇಬ್ಬರ ನಂಟಿನ ನಮೂನೆಗಳು ತಲೆಯೆತ್ತಿ ತಾಕಲಾಡಿ, ಇಬ್ಬರೂ ಹೈರಾಣಾಗುತ್ತಾರೆ! ಉದಾಹರಣೆಗೆ, ವಿಶೂ ತನ್ನ ಸಹೋದ್ಯೋಗಿ ಮಹಿಳೆಯ ಜೊತೆ ಸಲಿಗೆಯಿಂದ ಇದ್ದಾನೆ ಎಂದುಕೊಳ್ಳಿ. ಇದು ವಿಶಾಲಾಗೆ ಗೊತ್ತಾದಾಗ ಪರಿಣಾಮ? ಆಕೆಯ ಆತಂಕ ಆಕಾಶಕ್ಕೆ ಏರುತ್ತದೆ. ಆಗ ಗಂಡನ, ಅದು ಅಷ್ಟೇನೂ ಮಹತ್ವದ್ದಲ್ಲ, ಚಿಂತಿಸಬೇಡ ಎಂಬ ತಳ್ಳಿಹಾಕುವ ಮಾತು ಕೆಲಸ ಮಾಡುವುದಿಲ್ಲ; ಬದಲಾಗಿ ಅದು ಆಕೆಯ ಆತಂಕವನ್ನು ಸ್ಫೋಟಗೊಳಿಸುತ್ತದೆ! ಪರಿಣಾಮ? ಗಂಡ ಗಾಸಿಗೊಳ್ಳುತ್ತಾನೆ. ತಕ್ಷಣವೇ ಆ ಮಹಿಳೆಯ ಜೊತೆಗಿನ ಸಲಿಗೆಯನ್ನು ನಿಲ್ಲಿಸಿದರೂ ಅಪನಂಬಿಕೆಗೆ ಗುರಿಯಾದುದಕ್ಕೆ ವ್ಯಥೆ ಪಟ್ಟುಕೊಳ್ಳುತ್ತಾನೆ. ತಾನು ಶುದ್ಧವಾಗಿದ್ದರೂ ಆಪಾದನೆ ಹೊರುವ ಕರ್ಮಕ್ಕೆ, ಕಡ್ಡಿಯನ್ನು ಗುಡ್ಡ ಮಾಡಿದ್ದಕ್ಕೆ ಹೆಂಡತಿಯನ್ನು ದೂರೀಕರಿಸುತ್ತಾನೆ. ಈಗ ಅವರ ನಂಟುಗಳ ನಡುವಿನ ಸಂಘರ್ಷ ಬಯಲಿಗೆ ಬರುತ್ತದೆ! ಮುಂಚೆ ಹೆಂಡತಿಯ ಆತಂಕಕ್ಕೆ ಭರವಸೆಯ ಆಧಾರ ನೀಡುತ್ತಿದ್ದವನು, ಈಗ ಅದಕ್ಕೆ ಸ್ಪಂದಿಸದೆ, ನಿನ್ನ ಆತಂಕ ನಿವಾರಣೆಯ ಹೊಣೆ ನಿನ್ನದೇ ಎನ್ನುವಂತೆ ದೂರೀಕರಿಸುತ್ತಾನೆ. ಅಲ್ಲಿಂದ ಅವರು ಯಾವ ನಂಬಿಕೆಯ ಮೇಲೆ ಪರಸ್ಪರರನ್ನು ಆಯ್ಕೆ ಮಾಡಿಕೊಂಡಿದ್ದರೋ ಅದನ್ನೇ ನಂಬದವರಾಗುತ್ತಾರೆ. ದಾಂಪತ್ಯ ಇನ್ನೇನು ಮುರಿದೇ ಬೀಳುತ್ತದೆ ಎನ್ನುವ ಮಟ್ಟಕ್ಕೆ ಹೋಗುತ್ತದೆ. (ವಾಸ್ತವವಾಗಿ ಆದದ್ದೂ ಅದೇ. ಈ ದೃಷ್ಟಾಂತ ಕೌಟುಂಬಿಕ ನ್ಯಾಯಾಲಯದ್ದು. ವಿಚ್ಛೇದನಕ್ಕಾಗಿ ಅರ್ಜಿ ಹಾಕಲು ಬಂದ ದಂಪತಿಯನ್ನು ಅಲ್ಲಿಯ ಮಧ್ಯಸ್ಥಿಕೆಗಾರರೊಬ್ಬರು ನನ್ನ ಹತ್ತಿರ ಕಳಿಸಿದ್ದರು.)

ಇದರ ಪರಿಹಾರ ಹೇಗೆ? ವಿಶಾಲಾ ತನ್ನ ಆತಂಕವನ್ನು ಬದಿಗಿಟ್ಟು ಮುಂಚಿನಂತೆ ನಂಬಿಕೆಯನ್ನು ತೋರ್ಪಡಿಸುವಂತೆ ಅವಳ ಮನವೊಲಿಸುವುದೆ? ಬದಿಗಿಡಬೇಕೆಂದರೆ ಅವಳ ಆತಂಕದ ಭಾವನಾ ತಾತ್ಪರ್ಯವು ಜಾಗ್ರತವಾಗಿ ಗಂಡನ ಮೇಲೆ ಸದಾ ಕಣ್ಣಿಡುವಂತೆ ಮಾಡಿದೆ. ತನ್ನೊಳಗಿನ ಆತಂಕ ಕಡಿಮೆಯಾಗದ ಹೊರತೂ ಆಕೆ ಗಂಡನನ್ನು ನಂಬಲಾರಳು– ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಈಕೆಯ ಆತಂಕವು ಗಂಡನಿಗೆ ಸಂಬಂಧಪಡದೆ ತನ್ನದೇ ನಂಟಿನ ನಮೂನೆಗೆ ಸಂಬಂಧಪಟ್ಟಿದ್ದು, ಅದರ ನಿವಾರಣೆಗಾಗಿ ಆಕೆ (ಮುಂಚಿನಂತೆ) ವಿಶೂನ ಮೇಲೆ ಭಾರ ಊರುತ್ತಿದ್ದಾಳೆ. ಆದರೆ ಇಲ್ಲೊಂದು ಭಾರೀ ವ್ಯತ್ಯಾಸವಿದೆ: ಈಗ ಭರವಸೆಯ ವಿನಂತಿಯ ಬದಲು ಆರೋಪವಿದೆ! ಇದನ್ನು ವಿಶೂ ಹೇಗೆ ಅರ್ಥೈಸುತ್ತಾನೆ? ನಿನ್ನ ಮೇಲೆ ನಾನು ಇಟ್ಟಿರುವ ನಂಬಿಕೆಯನ್ನು ಹಾಳುಮಾಡಿದ್ದೀಯಾ. ನಿನ್ನನ್ನು ಪುನಃ ನಂಬುವಂತೆ ಮಾಡುವ ಹೊಣೆ ನಿನ್ನದು! ವಿಶೂನ ಉತ್ತರ? ನಿನಗೋಸ್ಕರ ನಾನು ಇಷ್ಟವಿಲ್ಲದಿದ್ದರೂ ಬದಲಾಗಿದ್ದೇನೆ. ಇದನ್ನು ಅರ್ಥಮಾಡಿಕೊಂಡು ನನ್ನನ್ನು ನಂಬುವ ಹೊಣೆ ನಿನ್ನದು. ಇಲ್ಲದಿದ್ದರೆ ನಾನು ಹತ್ತಿರ ಬರಲಾರೆ.

ದಾಂಪತ್ಯ ಚಿಕಿತ್ಸಕನಾಗಿ ನಾನು ಇವರ ಬಿಕ್ಕಟ್ಟನ್ನು ಹೇಗೆ ಬಗೆಹರಿಸಬಹುದು? ಮುಂಚಿನಂತೆ ವಿಶಾಲಾಳ ಆತಂಕದ ಜವಾಬ್ದಾರಿಯನ್ನು ಹೊರುವಂತೆ ವಿಶೂನ ಮನವೊಲಿಸುವುದೆ? ವಿಶೂ ಬದಲಾಗಿದ್ದನ್ನು ವಿಶಾಲಾಗೆ ತೋರಿಸಿ, ಅವಳು ತನ್ನ ಅಪನಂಬಿಕೆಯನ್ನು ಮರೆಯುವಂತೆ ಬೋಧಿಸುವುದೆ? ಇಬ್ಬರಿಗೂ ಸ್ವಲ್ಪ ಕಾಲ ದೂರವಿರುವಂತೆ ಸೂಚಿಸುವುದೆ? ಮಕ್ಕಳಿಗೋಸ್ಕರ ಶೇಷಾಯುಷ್ಯ ಕಳೆಯುವಂತೆ ಇಬ್ಬರನ್ನೂ ಒತ್ತಾಯಿಸುವುದೆ? ಅವರ ನಂಟಿನ ನಮೂನೆಗಳನ್ನು ನೋಡಿದರೆ ಇವು ಯಾವುವೂ ಫಲ ಕೊಡುವುದಿಲ್ಲ ಎಂದು ಸ್ಪಷ್ಟವಾಗುತ್ತದೆ – ಹಾಗಾಗಿಯೇ ಅವರು ನ್ಯಾಯಲಯದ ಮೊರೆಹೋಗಿದ್ದಾರೆ. ಅಷ್ಟಲ್ಲದೆ, ಸಲಹೆ, ಒತ್ತಾಯ, ಬೋಧನೆ, ಮನವೊಲಿಕೆ, ಮಾರ್ಗದರ್ಶನ – ಇದ್ಯಾವುದೂ ದಾಂಪತ್ಯ ಚಿಕಿತ್ಸೆಯ ಭಾಗವಲ್ಲ!

**ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಬೆಳಿಗ್ಗೆ 11ರಿಂದ ಸಂಜೆ 5ರ ತನಕ ಕರೆಮಾಡಿ.**
**ಲೇಖಕರ ವಿಳಾಸ: www.medisex.org**